ಆ) ಇಲ್ಲದಿದ್ದಲ್ಲಿ, ಯಾವ ಹಂತದಲ್ಲಿ ಸರ್ವೆ ಕಾರ್ಯಗಳು ನಡೆಯುತ್ತಿವೆ;

ಇ) ಹೈದ್ರಾಬಾದ್ ಮೂಲದ ಸ್ಯಾಟಲೈಟ್ ಸರ್ವೆ ವರದಿ ಈಗ ಯಾವ ಹಂತದಲ್ಲಿದೆ (ವಿವರ ನೀಡುವುದು)?

ಶ್ರೀ ಬಸವರಾಜ ಬೊಮ್ಮಾಯಿ (ಜಲ ಸಂಪನ್ಮೂಲ ಸಚಿವರು) :

ಅ) ರಾಜ್ಯದ ಬರಪೀಡಿತ ಪ್ರದೇಶಗಳಿಗೆ ಕುಡಿಯುವ ನೀರನ್ನು ಹಾಗೂ ಅಂತರ್ಜಲ ಅಭಿವೃದ್ಧಿ ಬಗ್ಗೆ ಅಧ್ಯಯನವನ್ನು ನಡೆಸಿ, ಸರ್ಕಾರಕ್ಕೆ ವರದಿಯನ್ನು ನೀಡುವಂತೆ ಶ್ರೀ ಜಿ.ಎಸ್. ಪರಮಶಿವಯ್ಯ, ನಿವೃತ್ತ ಅಧೀಕ್ಷಕ ಇಂಜಿನಿಯರ್, ಇವರ ಅಧ್ಯಕ್ಷತೆಯಲ್ಲಿ ಸರ್ಕಾರದ ಆದೇಶ ಸಂ: ನೀಇ 107 ಎಂಬಿಐ 2000, ದಿನಾಂಕ: 26-8-2000 ರಲ್ಲಿ ರಚಿಸಿದ್ದ ಸಮಿತಿಯು ದಿ: 23-03-2001 ರಂದು ತನ್ನ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿತ್ತು.

ಆ) ಸಮಿತಿಯ ವರದಿಯ ನಂತರದಲ್ಲಿ, ಪ್ರಸ್ತಾವಿತ ಯೋಜನೆಯ ವೈಮಾನಿಕ ಸಮೀಕ್ಷೆ ಹಾಗೂ ವಿವರವಾದ ಯೋಜನಾ ವರದಿ ತಯಾರಿಕಾ ಕಾರ್ಯವನ್ನು 2003 ರಲ್ಲಿ ಎನ್.ಆರ್.ಎಸ್.ಸಿ. ಹೈದ್ರಾಬಾದ್, ಸಂಸ್ಥೆಗೆ ವಹಿಸಲಾಗಿದೆ. ಮಾಲಾ ಕಾಲುವೆಯ ವೈಮಾನಿಕ ಸಮೀಕ್ಷೆ ಕಾರ್ಯವು ಪೂರ್ಣಗೊಂಡಿದ್ದು, ಸೇವಾ ಕಾಲುವೆಗಳ ವೈಮಾನಿಕ ಸಮೀಕ್ಷೆ ಕಾರ್ಯವನ್ನು ಇನ್ನು ಕೈಗೊಳ್ಳುವುದು ಬಾಕಿ ಇದೆ.

ಇ) ಸದರಿ ಸಂಸ್ಥೆಯು ಈ ಯೋಜನೆಗೆ ಸಂಬಂಧಿಸಿದಂತೆ 1756 ಚದರ ಕಿ.ಮೀ. ವಿಸ್ತೀರ್ಣದಲ್ಲಿ ಮಾಲಾ ಕಾಲುವೆಗಳ ವೈಮಾನಿಕ ಸಮೀಕ್ಷೆ ಕಾರ್ಯವನ್ನು ಪೂರ್ಣಗೊಳಿಸಿರುತ್ತದೆ. ಸದರಿ ಯೋಜನೆಯ ನೀರಿನ ಲಭ್ಯತೆಯ ವರದಿಯನ್ನು ಹಾಗೂ ಸುಮಾರು 13 Thematic ನಕ್ಷೆಗಳನ್ನು ಈ ಸಂಸ್ಥೆಯು ಜಲಸಂಪನ್ಮೂಲ ಅಭಿವೃದ್ಧಿ ಸಂಸ್ಥೆಗೆ ಸಲ್ಲಿಸಿರುತ್ತದೆ. ಸೇವಾ ಕಾಲುವೆಗಳ ವೈಮಾನಿಕ ಸಮೀಕ್ಷೆ ಕಾರ್ಯವನ್ನು ಇನ್ನು ಕೈಗೊಳ್ಳುವುದು ಬಾಕಿ ಇದೆ.

205 ಶ್ರೀ ಜಾರಕಿಹೊಳಿ ಸತೀಶ್ ಲಕ್ಷ್ಮಣರಾವ್ : ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾವಿ ಜಿಲ್ಲೆಯ ಬೆಳಗಾವಿಯ ತಾಲ್ಲೂಕಿನ ಹುದಲಿ ಗ್ರಾಮದಲ್ಲಿ ಮಾರ್ಕಂಡೇಯ ಕಾಲುವೆ ಬಿರುಕು ಬಿಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಈ ಕಾಲುವೆಯ ದುರಸ್ತಿಗೆ ಯಾವ ಕ್ರಮ ಕೈಗೊಳ್ಳಲಾಗಿದೆ;

ಇ) ಸದರಿ ಕಾಲುವೆ ಬಿರುಕಿನಿಂದಾಗಿ ಎಷ್ಟು ಎಕರೆ ಜಮೀನು ಜವಳು ಹಿಡಿದಿದೆ?

ಶ್ರೀ ಬಸವರಾಜ ಬೊಮ್ಮಾಯಿ (ಜಲಸಂಪನ್ಮೂಲ ಸಚಿವರು) :

ಅ) ಮಾರ್ಕಂಡೇಯ ಕಾಲುವೆಯಲ್ಲಿ ಬಿರುಕು ಬಿಟ್ಟಿರುವುದಿಲ್ಲ. ಆದರೆ ಬಲದಂಡೆ ಕಾಲುವೆಯ ಕಿ.ಮೀ.0.00 ರಿಂದ 5.00 ಭಾಗದಲ್ಲಿ ನೀರು ಸೋರುವಿಕೆ ಕಂಡು ಬಂದಿದೆ.

ಆ) ಸದರಿ ಭಾಗದ ಕಾಲುವೆ ದುರಸ್ತಿಗೆ ಕರ್ನಾಟಕ ನೀರಾವರಿ ನಿಗಮದಿಂದ ಪ್ರಸಕ್ತ ಸಾಲಿನಲ್ಲಿ ರೂ.99.20 ಲಕ್ಷಗಳ ಅನುದಾನ ಬಿಡುಗಡೆ ಮಾಡಲಾಗಿದೆ. ಈ ಕಾಮಗಾರಿಯ ಅಂದಾಜನ್ನು ತಯಾರಿಸಿಕೊಂಡು ನಿಗಮದ ತಾಂತ್ರಿಕ ಉಪ ಸಮಿತಿಯು ತೀರುವಳಿ ಪಡೆದನಂತರ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದು.

ಇ) ಮೇಲೆ ಹೇಳಿರುವ ಭಾಗದಲ್ಲಿನ ನೀರಿನ ಸೋರುವಿಕೆಯಿಂದಾಗಿ ಸುಮಾರು 80 ರಿಂದ 100 ಎಕರೆ ಪ್ರದೇಶವು ಸವಳಾಗಿರುವುದಾಗಿ ತಿಳಿದುಬಂದಿದೆ.

309 ಶ್ರೀ ಕರಡಿ ಸಂಗಣ್ಣ ಅಮರಪ್ಪ : ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಪ್ಪಳ ಜಿಲ್ಲೆಯ ಸಿಂಗಟಾಲೂರು ಏತ ನೀರಾವರಿಯ ಯೋಜನೆಗೆ ನಿಗದಿಪಡಿಸಿದ ನೀರಿನ ಪ್ರಮಾಣವೆಷ್ಟು; ಹಾಗಿದ್ದಲ್ಲಿ, ಸದರಿ ಯೋಜನೆಗೆ ಯಾವ ಯಾವ ಕಾರ್ಯಕ್ರಮದಡಿ ನೀರಾವರಿ ಕಲ್ಪಿಸಲಾಗಿದೆ; (ವಿವರಗಳನ್ನು ನೀಡುವುದು);

ಆ) ಸದರಿ ಯೋಜನೆಯನ್ನು ಸ್ಥಾಪಿಸುವಾಗ ಸರ್ಕಾರವು ನಿಗದಿಪಡಿಸಿರುವ ಮೊತ್ತವೆಷ್ಟು; ಈಗಾಗಲೇ ಖರ್ಚು ಮಾಡಲಾಗಿರುವ ಮತ್ತು ಬಾಕಿ ಉಳಿದಿರುವ ಮತ್ತು ಬೇಕಾಗಿರುವ ಮೊತ್ತವೆಷ್ಟು; (ವಿವರಗಳನ್ನು ನೀಡುವುದು);

ಇ) ಈ ಯೋಜನೆಯಲ್ಲಿ ಎಡದಂಡೆ ಮತ್ತು ಬಲದಂಡೆ ನಾಲೆಗಳಲ್ಲಿ ಕೈಗೆತ್ತಿಕೊಂಡ ಅಣೆಕಟ್ಟುಗಳ ಕಾಮಗಾರಿಗಳು ಯಾವುವು; (ತಾಲ್ಲುಕುವಾರು ವಿವರ ನೀಡುವುದು);